

ಬಾಳ ಸಂಗಾತಿ ಚಂದ್ರಿಕಾ ಜೊತೆ

ನನ್ನ ಬಾಲ್ಯ ಅಷ್ಟೇನೂ ಚೆಂದವಿರಲಿಲ್ಲ. ಅಮ್ಮನ ದಟ್ಟ ನೆನಪುಗಳು ನನ್ನ ಬಾಲ್ಯದ ಬುತ್ತಿಯಲ್ಲಿ ಇಲ್ಲ. ಬಾಲ್ಯವೆಂದರೆ ಬಡತನವೆಂಬುದಷ್ಟೇ ನೆನಪಾಗುತ್ತದೆ. ನಾನು ಬಹಳ ಚಿಕ್ಕವನಿದ್ದಾಗಲೇ ಅಮ್ಮ ತೀರಿಕೊಂಡರು. ಅಪ್ಪನಿಗೆ ಮಕ್ಕಳ ಹಂಗಿಲ್ಲ ಎಂಬಂತೆ ಧಣಿಗಳ ಮನೆಯ ದುಡಿಮೆಯಲ್ಲಿಯೇ ಇದ್ದರು. ಈ ದರಿದ್ರ ಪ್ರಪಂಚದಲ್ಲಿ ತಾನು ಯಾಕೆ ಬದುಕಬೇಕು ಎಂಬ ಪ್ರಶ್ನೆ ಕಾಡಿದಾಗ ಆತ್ಮಹತ್ಯೆಗೆ ಪ್ರಯತ್ನಿಸಿದ್ದೂ ಉಂಟು. ಆದರೆ ಬಾಲ್ಯದಲ್ಲಿ ಬೇಸರವೇ ತುಂಬಿತ್ತು ಎಂದರೆ ತಪ್ಪಾಗುತ್ತದೆ. ಬಾಲ್ಯದಲ್ಲಿಯೇ ನನಗೆ ಕಥಕಳಿಯು ಒಲಿದು ಬಂದದ್ದಲ್ಲವೇ. ಹಾಗಾಗಿ ನಾನು ವ್ಯಥೆಪಡುವುದೇತಕ್ಕೆ ಎಂದು ಮನಸ್ಸನ್ನು ಸಮಾಧಾನ ಮಾಡಿಕೊಳ್ಳುತ್ತೇನೆ. ನನಗೆ ಎಂಟು ವರ್ಷವಾಗಿದ್ದಾಗ ಎಲ್ಲೆಲ್ಲೋ ಅಲೆದಾಡಿಕೊಂಡಿದ್ದೆ. ಮನೆಯ ಪಕ್ಕದಲ್ಲಿಯೇ ಇದ್ದ ನಾರೇರಿ ಮನೆಯಲ್ಲಿ ಪರಮೇಶ್ವರನ್ ನಂಬೀಶನ್ ಎಂಬವರು ತುಳ್ಳಲ್ ಗುರುಗಳಾಗಿದ್ದರು. 'ತುಳ್ಳಲ್' ಎನ್ನುವುದು ದೇವಸ್ಥಾನಗಳಲ್ಲಿ ನಡೆಸುವ ನಾಟ್ಯಸೇವೆ. ಇತರ ಕಡೆಗಳಲ್ಲೂ ಇದನ್ನು ಪ್ರದರ್ಶಿಸುತ್ತಾರೆ. ಅಲ್ಲಿ ಒಂದು ವರ್ಷ ಕಲಿತ ಬಳಿಕ ನಾನು ಕೂಡಲ್ಲೂರು ಎಂಬಲ್ಲಿ ನಂಬೂದರಿಯವರ ಮನೆಯಲ್ಲಿ ಕಥಕಳಿ ಕಲಿಯಲು ಶುರು ಮಾಡಿದೆ. ಅಲ್ಲಿ ತೇಕ್ಕಿನ್‌ಕಾಟಿಲ್ ರಾವುಣ್ಣಿ ನಾಯರ್ ಅವರು ಕಥಕಳಿಯ ಅಭಿನಯ ಚಾತುರ್ಯವನ್ನು ಹೇಳಿಕೊಟ್ಟ ಗುರುಗಳು.

ಕಥಕಳಿ ಕಲಿಕೆ ಸುಲಭವಾದದ್ದಲ್ಲ. ಲಯತಪ್ಪಿದರೆ, ಹೆಜ್ಜೆ ತಪ್ಪಿದರೆ ಕಠಿಣ ಶಿಕ್ಷೆಗಳು, ಗುರುಗಳ ಕಟ್ಟುನಿಟ್ಟಿನ ಪಾಠಗಳೆಲ್ಲ ಇಂದಿಗೂ ನೆನಪಿದೆ. ಶ್ರಮಪಟ್ಟು ಕಲಿಯಬೇಕಾಗಿತ್ತು ಅಲ್ಲಿ. ಆ ತರಬೇತಿಯ ಕಷ್ಟ ತಾಳಲಾಗದೇ ಒಮ್ಮೆ ತರಬೇತಿ ಬಿಟ್ಟು ಓಡಿಹೋದೆ. ಈ ಕಥಕಳಿ ಸಹವಾಸ ಬೇಡ, ಮಿಲಿಟರಿಗೆ ಸೇರೋಣ ಎಂದುಕೊಂಡು ಅಲ್ಲಿಂದ ಹೊರಟೆ. ಆದರೆ ಪೇಟೆಗೆ ಹೋಗಲು ನದಿಯೊಂದನ್ನು ದಾಟಬೇಕಿತ್ತು. ದೋಣಿಗಾಗಿ ಕಾಯುತ್ತಿದ್ದಾಗ ಪಕ್ಕದಲ್ಲೇ ಇದ್ದ ಚಹಾ ಅಂಗಡಿ ನಡೆಸುತ್ತಿದ್ದ ಮುಸಲ್ಮಾನ ವ್ಯಕ್ತಿ, 'ಮೋನೆ, ಎಲ್ಲಿ ಹೋಗುತ್ತಿದ್ದಿ...' ಎಂದು ಪ್ರಶ್ನಿಸಿದ. ನಾನು ಮಿಲಿಟರಿ ಸೇರಬೇಕು ಎಂದುಕೊಂಡಿದ್ದ ವಿಷಯವನ್ನು ಬೇಸರದಲ್ಲಿಯೇ ಹೇಳಿದೆ. 'ಚಿಕ್ಕಮಕ್ಕಳನ್ನೆಲ್ಲ ಮಿಲಿಟರಿಗೆ ಸೇರಿಸಿಕೊಳ್ಳುವುದಿಲ್ಲ' ಎಂದು ಸಮಾಧಾನಪಡಿಸಿದ ಆತ, ಯಾರನ್ನೋ ಜೊತೆ ಮಾಡಿ ನನ್ನನ್ನು ಮರಳಿ ಮನೆಗೆ ಕಳುಹಿಸಿಕೊಟ್ಟ. ಹಾಗೆ ನಾನು ಕಥಕಳಿಯ ಮಡಿಲಿಗೆ ಮತ್ತೆ ಬಂದೆ. ಆ ಮನೆಯಲ್ಲಿ ದೊರೆಯುತ್ತಿದ್ದ ತರಬೇತಿಯು ಕಾರಣಾಂತರಗಳಿಂದ ನಿಂತು ಹೋದಾಗ, ಪರಮೇಶ್ವರನ್ ನಂಬೀಶನ್ ಮತ್ತು ನನ್ನ ತಂದೆಯವರು ನನ್ನನ್ನು ಕಲಾಮಂಡಲ ಸಂಸ್ಥೆಗೆ ಕರೆದುಕೊಂಡು ಹೋದರು. ಈ ಹುಡುಗ ಕಲಾಮಂಡಲಂನಲ್ಲಿ ಕಲಿಯಲಿ ಎಂದು ಆಶೀರ್ವದಿಸಿದವರು ಕಲಾಮಂಡಲಂ ಸಂಸ್ಥೆಯ ಸಂಸ್ಥಾಪಕ ಮಹಾಕವಿ ವಳ್ಳತ್ತೋಳ್ ನಾರಾಯಣ ಮೆನನ್. ಸಾಮಾನ್ಯವಾಗಿ ಕಲಾಮಂಡಲಂನಲ್ಲಿ